**<u>ಸಾಕ್ಷಿಯನ್ನು ದಿನಾಂಕ 04.09.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 4 ರಿಂದ 9 ನೇ ಪ್ರತಿವಾದಿಯರ ಪರ ಶ್ರೀ ಟಿಎನ್ ಎಸ್ ವಕೀಲರಿಂದಃ</u>**

14. ಈ ಕೇಸಿನಲ್ಲಿ ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಒದಿ, ಒದಿಸಿ ತಿಳಿದುಕೊಂಡಿದ್ದೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ಸರಿಯಾಗಿರುತ್ತದೆ. 4 ರಿಂದ 9 ನೇ ಪ್ರತಿವಾದಿಯರ ತಾತನ ಹೆಸರಿಗೆ ದಾವಾ ಐಟಂ ನಂ 2 ಮತ್ತು 3 ಕ್ರಯ ಪತ್ರಗಳು ಅದ ಸಮಯದಲ್ಲಿ ವಾದಿಗಳು ಜನಿಸಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ವಾದಿಗಳನ್ನು ಸಹ ಅ ಸಮಯದಲ್ಲಿ ವಾದಿಗಳು ಜನಿಸಿದ್ದರೋ ಇಲ್ಲವೋ ಎಂಬ ವಿಚಾರಗಳನ್ನು ಕೇಳಿ ತಿಳಿದುಕೊಂಡಿಲ್ಲ. ವಾದಿಗಳನ್ನು ಈ ಕೇಸಿನ ಪೂರ್ತಿ ವಿಚಾರಗಳ ಬಗ್ಗೆ ಕೇಳಿಲ್ಲ. ಒಎಸ್ 136/2015 ಅನ್ನು ವಾದಿಯರೇ ದಾಖಲಿಸಿದ್ದಾರೆ. ಅ ದಾವೆಯನ್ನು ವಾದಿಯರು, ಮಾರಾಟ ಮಾಡಿರುವ ಅಸ್ತಿಗಳಿಗೆ ಸಂಬಂದಿಸಿದಂತೆ ಸಲ್ಲಿಸಿದ್ದಾರೆ. ಒಎಸ್ 136/2015 ರ ದಾವೆಯನ್ನು ವಾದಿಯರು ಘೋಷಣಾತ್ಮಕ ಮತ್ತು ನಿಬರ್ಂದಕಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದಾರೆ. ಒಎಸ್ 136/2015 ರಲ್ಲಿ ಹೇಳಿರುವ ಅಸ್ತಿಗಳನ್ನು ಯಾರು ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ.

15. ಈ ದಾವೆಯನ್ನು ಸಹ ಮಾರಾಟ ಮಾಡಿದ ಅಸ್ತಿಗಳಿಗೆ ವಾದಿಗಳು ಸಲ್ಲಿಸಿದ್ದಾರೆಂದರೆ ಸಾಕ್ಷಿ ಮಾರಾಟ ಮಾಡಿದ ಅಸ್ತಿಗಳಿಗೆ ಸಲ್ಲಿಸಿದ್ದಾರೆ, ಮಾರಾಟ ಮಾಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಕೇಸಿನ

ದಾವಾ ಅಸ್ತಿಗಳನ್ನು ಮಾರಾಟ ಮಾಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ಕ್ರಯ ಪತ್ರಗಳು ಮಾರಾಟ ಮಾಡಿದ ಅಸ್ತಿಗಳಿಗೆ ಸಂಬಂದಿಸಿದಂತೆ ಇವೆಯಾ ಎಂದರೆ ಸಾಕ್ಷಿ ನಮ್ಮ ಅಸ್ತಿಗಳಿಗೆ ಸಂಬಂದಿಸಿದಂತೆ ಇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಪೈಕಿ ಮಾರಾಟ ಮಾಡದೇ ಇರುವ ಯಾವುದೇ ಅಸ್ತಿ ಇಲ್ಲ.

16. ನಮ್ಮ ಮುತ್ತಾತನ ತಂದೆ ಮೂಲ ಪುರುಷ ತಿಮ್ಮಯ್ಯ. ಮೂಲ ಪುರುಷ ತಿಮ್ಮಯ್ಯ ಮತ್ತು ಅತನ ಮಕ್ಕಳು ಸಂಪಾದನೆ ಮಾಡಿ ಮಾರಾಟ ಮಾಡದೇ ಇರುವ ಅಸ್ತಿಗಳು ಈಗ ಯಾವುವು ಉಳಿದಿಲ್ಲ. ವಾದಿಯರ ಕುಟುಂಬಕ್ಕೆ ಈಗ ಮಾರಾಟ ಮಾಡದ ಉಳಿದಿರುವ 4 ಐಟಂ ಅಸ್ತಿಗಳು ಇವೆ. ಒಂದು ಮನೆ, 4 ಸರ್ವೆ ನಂಬರ್ ಅಸ್ತಿಗಳು ಇರುತ್ತವೆ. ಅ ಮನೆ ಮೂಲ ಪುರುಷ ತಿಮ್ಮಯ್ಯನ ಕಾಲದಿಂದಲೂ ಇದೆ. ಈ ಮೇಲೆ ಹೇಳಿದ 4 ಸರ್ವೆ ನಂಬರ್ ಅಸ್ತಿಗಳನ್ನು ಮೂಲ ಪುರುಷ ತಿಮ್ಮಯ್ಯನ ಚಿಕ್ಕ ಮಗ ಚನ್ನಪ್ಪ ಸಂಪಾದಿಸಿದ ಅಸ್ತಿಗಳು. 1947 ರಲ್ಲಿ ಚನ್ನಪ್ಪರವರು ನಾರಾಯಣಮ್ಮರವರಿಂದ ಅ 4 ಸರ್ವೆ ನಂಬರ್ ಅಸ್ತಿಗಳನ್ನು ಖರೀದಿಸಿದ್ದರು.

17. ದಾವಾ ಐಟಂ ನಂ 2 ಮತ್ತು 3, 4 ರಿಂದ 9 ನೇ ಪ್ರತಿವಾದಿಯರಿಗೆ ಯಾರು ಮಾರಾಟ ಮಾಡಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಮೂಲ ಪುರುಷ ತಿಮ್ಮಯ್ಯನ 3 ಜನ ಮಕ್ಕಳು ಮತ್ತು ಮೊಮ್ಮಕ್ಕಳು ಬೇರೆ ಬೇರೆ ವಾಸವಾಗಿದ್ದಾರೆ. ಮೂಲ ಪುರುಷ ತಿಮ್ಮಯ್ಯನ 3 ಮಕ್ಕಳು ಬೇರೆ ಹೋದಾಗ 20 ಅಸ್ತಿಗಳು ಇದ್ದವು. 1940 ರಲ್ಲಿಯೇ ಅ

20 ಆಸ್ತಿಗಳನ್ನು ಮೂಲ ಪುರುಷ ತಿಮ್ಮಯ್ಯನ 3 ಮಕ್ಕಳು ಹಂಚಿಕೊಂಡು ಬೇರೆ ಬೇರೆಯಾಗಿದ್ದರು.

18. ನನ್ನ ಮುತ್ತಾತ ಚನ್ನಪ್ಪನಿಗೆ ಒಬ್ಬ ಮಗ ನಾರಾಯಣಪ್ಪ. ನಾರಾಯಣಪ್ಪನವರಿಗೆ 3 ಜನ ಮಕ್ಕಳು. ನಾರಾಯಣಪ್ಪನ 3 ಜನ ಮಕ್ಕಳು ಒಟ್ಟಿಗೆ ಇರುವ ಬಗ್ಗೆ ದಾಖಲೆಗಳು ಯಾವುದಾದರೂ ಇವೆಯಾ ಎಂದರೆ ಸಾಕ್ಷಿ ದಾಖಲೆ ಇಲ್ಲ ಆದ್ದರಿಂದಲೇ ಈ ಕೇಸನ್ನು ಹಾಕಿದ್ದೇವೆಂದು ನುಡಿಯುತ್ತಾರೆ. ನಾರಾಯಣಪ್ಪನ 3 ಜನ ಮಕ್ಕಳಿಗೆ ಒಂದೇ ಮನೆ ಇರುತ್ತದೆ. ಆ 3 ಜನ ಮಕ್ಕಳಿಗೆ ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ ಬೇರೆ ಬೇರೆ ಇರುತ್ತದೆ. ಆ 3 ಜನ ಮಕ್ಕಳು ಅವರವರ ಮನೆಗೆ ಅವರೇ ಯಜಮಾನರು ಎಂದರೆ ಸರಿ. ಆ 3 ಜನ ಮಕ್ಕಳ ಹೆಸರಿಗೆ ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿಗಳು ಆಗಿ ಮತ್ತು ಅವರುಗಳು ಮನೆಯ ಯಜಮಾನರಾಗಿ 40 ವರ್ಷ ಕಳೆದಿದೆ.

19. ಈ ಕೇಸನ್ನು ದಾಖಲಿಸುವಾಗ ವಕೀಲರಿಗೆ ಮಾಹಿತಿಯನ್ನು ನಾನೇ ಹೋಗಿ ನೀಡಿದ್ದೇನೆ. ಮಾರಾಟ ಮಾಡಿರುವ ಆಸ್ತಿಗಳು ಯಾವುವು ಮತ್ತು ಮಾರಾಟ ಮಾಡದೇ ಇರುವ ಆಸ್ತಿಗಳು ಯಾವುವು ಎಂಬ ಮಾಹಿತಿಯನ್ನು ವಕೀಲರಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ನಾವು ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ನಾರಾಯಣಪ್ಪ ತೀರಿಕೊಂಡು 15 ವರ್ಷ ಕಳೆದಿದೆ. ಚನ್ನಪ್ಪ 1958 ರಿಂದ 59 ರಲ್ಲಿ

ತೀರಿಕೊಂಡಿರಬಹುದು. ನಾರಾಯಣಪ್ಪ ಮತ್ತು ಚನ್ನಪ್ಪನವರ ಜೀವಿತಾವದಿಯಲ್ಲಿ ಮಾರಾಟ ಮಾಡಿದ ಅಸ್ತಿಗಳಿಗೆ ಕೇಸನ್ನು ಏಕೆ ದಾಖಲಿಸಿಲ್ಲ ಎಂದು ತಿಳಿದುಕೊಂಡಿಲ್ಲ.

20. ದಾವಾ ಐಟಂ ನಂ 2 ಮತ್ತು 3 ವಾದಿಗಳಿಗೆ ಯಾವ ದಾಖಲೆಗಳ ಮೂಲಕ ಬಂದಿದೆ ಎಂದರೆ ಸಾಕ್ಷಿ ಚನ್ನಪ್ಪನವರ ಕಡೆಯಿಂದ ವಾದಿಯರಿಗೆ ಬಂದಿದೆ ಎಂದು ನುಡಿಯುತ್ತಾರೆ. ಚನ್ನಪ್ಪನವರ ಕಡೆಯಿಂದ ವಾದಿಯರಿಗೆ ಐಟಂ ನಂ 2 ಮತ್ತು 3 ರೆವಿನ್ಯೂ ದಾಖಲೆಗಳ ಮೂಲಕ ಬಂದಿದೆ. ವಾದಿಯರಿಗೆ 1947 ರಲ್ಲಿ ರಿಜಿಸ್ಟ್ರರ್ ಅದ ನಂತರ ಅಗಲೇ ರೆವಿನ್ಯೂ ದಾಖಲೆಗಳ ಮೂಲಕ ದಾವಾ ಐಟಂ ನಂ 2 ಮತ್ತು 3 ಬಂದಿದೆ. 1947 ರಲ್ಲಿ ವಾದಿಯರು ಜನಿಸಿರಲಿಲ್ಲ. ದಾವಾ ಐಟಂ ನಂ 2 ಮತ್ತು 3 ಕ್ಕೆ ಸಂಬಂದಿಸಿದ ರೆವಿನ್ಯೂ ದಾಖಲೆಗಳು ಅ ಅಸ್ತಿಗಳನ್ನು ಮಾರಾಟ ಮಾಡಿದ ನಂತರ ಇದುವರೆಗೂ ವಾದಿಯರು ಮತ್ತು ಅವರ ತಂದೆಯ ಹೆಸರಿನಲ್ಲಿ ಬರುತ್ತಿಲ್ಲ. ಸಾಕ್ಷಿ ಸ್ವತಃ ದಾಖಲೆಗಳನ್ನು ಪೋರ್ಜರಿ ಮಾಡಿದ್ದಾರೆಂದು ನುಡಿಯುತ್ತಾರೆ. ಪೋರ್ಜರಿ ಮಾಡಿದ ದಾಖಲೆಗಳನ್ನು ನಾನು ನೋಡಿಲ್ಲ. ನಾನು ಹಾಜರು ಪಡಿಸಿರುವ ದಾವಾ ಐಟಂ ನಂ 2 ಮತ್ತು 3 ರ ರೆವಿನ್ಯೂ ದಾಖಲೆಗಳು ಯಾವ ಕ್ರಯ ಪತ್ರದ ಅಧಾರದ ಮೇಲೆ ಅಗಿವೆ ಎಂದು ನಾನು ನೋಡಿಲ್ಲ. ವಾದಿಯರಿಗೆ ದಾವಾ ಐಟಂ ನಂ 2 ಮತ್ತು 3 ರ ಮೇಲೆ ಯಾವುದೇ ಹಕ್ಕು ಮತ್ತು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಲು ಸುಳ್ಳು ಕೇಸನ್ನು ದಾಖಲಿಸಿದ್ದೇವೆಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ನಂ 10, 12, 14 ರಿಂದ 16, 18 ರಿಂದ 20, 22, 23 ರ ಪರವಾಗಿ ಶ್ರೀ ಎನ್ ಕೆಡಿ ವಕೀಲರಿಂದಃ ವಕೀಲರು ಈ ಮೇಲೆ ಶ್ರೀ ಟಿಎನ್ ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡು ಮುಂದುವರೆದ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.